# ಇರುವಿಕೆ ಮತ್ತು ತೋರುವಿಕೆಯ ನಡುವಿನ ಕಂದರ



**ಪ್ರೇಮ ಎಂಬುದು ಸಹಜವಾಗಿ ಹುಟ್ಟಬೇಕು ಎನ್ನುವುದು ಎಷ್ಟು ಸತ್ಯವೋ ಅದು ಸಹಜವಾಗಿ ಉಳಿಯಬೇಕು ಎನ್ನುವುದೂ ಅಷ್ಟೇ ಸತ್ಯ. ಸಹಜವಾಗಿ ಉಳಿಯದ ಪ್ರೇಮವನ್ನು ಕಷ್ಟಪಟ್ಟು ಉಳಿಸಿಕೊಳ್ಳಲು ಹೊರಟವರ ಕತೆಯನ್ನು ಈ ಕಿರುಚಿತ್ರ ಹೇಳುತ್ತದೆ.**

■ ಗೌರಿ



**ಹೆಸರು:** ಸೇಪಿಯಾ
**ನಿರ್ದೇಶನ:** ಅರ್ಚಿತ್ ಕುಮಾರ್
**ನಿರ್ಮಾಣ:** ಝೋಯೆಬ್ ಸ್ಪ್ರಿಂಗ್‌ವಾಲಾ
**ಛಾಯಾಗ್ರಹಣ:** ಅನುಭವ ಬನ್ಸಾಲ್
**ಸಂಕಲನ:** ಅಂತರಾ ಲಾಹಿರಿ
**ತಾರಾಗಣ:** ಅಪಾರಶಕ್ತಿ ಖುರಾನಾ, ಸಪ್ನಾ ಪಬ್ಬಿ

ಅವನು ಉದಯೋನ್ಮುಖ ನಟ. ಅವನಿಗೆ ಜ್ಯೋತಿಷ್ಯದ ಮೇಲೆ ನಂಬಿಕೆ. ಹೆಸರಿನ ಒಂದಕ್ಷರ ಬದಲಿಸಿಕೊಳ್ಳುವುದರಿಂದ ಅದೃಷ್ಟ ಬದಲಾಗುತ್ತದೆ ಎಂದು ನಂಬಿಕೊಂಡಿರುವವನು. ಅವಳಿಗೆ ಈ ಎಲ್ಲವೂ ತಮಾಷೆ, ಕಿರಿಕಿರಿ ಹುಟ್ಟಿಸುವ ಸಂಗತಿಗಳು. 'ಹರ್' ಎಂಬ ಮಹಿಳಾವಾದಿ ಪತ್ರಿಕೆ ನಡೆಸುತ್ತಿದ್ದಾಳೆ. ಅವರಿಬ್ಬರಿಗೂ ಕೆಲವೇ ದಿನಗಳಲ್ಲಿ ಮದುವೆ ನಡೆಯಲಿದೆ. ಅವರ ಸ್ವಭಾವದಲ್ಲಿಯೇ ಇರುವ ವ್ಯತ್ಯಾಸಗಳು ಅವರ ಸಂಬಂಧದಲ್ಲಿಯೂ ಬಿರುಕುಗಳನ್ನು ಮೂಡಿಸಿವೆ. ಆದರೆ ಹೊರಜಗತ್ತಿನ ಕಣ್ಣಿಗೆ ಅವರ ಸಂಬಂಧ ಅನುರೂಪ. ಒಳಗೊಳಗೇ ವಿರೂಪಗೊಳ್ಳುತ್ತ ಸಾಗುತ್ತಿದೆ. ಹೊರಮೈ ಹೊಳಪುಳಿಸಿಕೊಂಡು ಒಳಗೊಳಗೇ ಕೊಳೆಯುತ್ತ ಹೋಗುವ ಹಣ್ಣಿನ ಹಾಗೆ.

ಗಂಡು ಹೆಣ್ಣಿನ ಸಂಬಂಧ ಸಮಾಜದಲ್ಲಿ ಅಧಿಕೃತಗೊಳ್ಳುತ್ತ ಸಾಗಿದ ಹಾಗೆಯೇ ಅದು ಬಂಧನವೂ ಆಗುತ್ತಾ ಹೋಗುತ್ತದೆ. ತೋರಿಕೆ ಮತ್ತು ವಾಸ್ತವದ ನಡುವೆ ವ್ಯತ್ಯಾಸ ಕಾಣಲು ಶುರುವಾಗುತ್ತದೆ. ಆದರೆ ಸಮಾಜ ಆಗಲೇ ಅವರ ಸುತ್ತ ಒಂದು ಬಗೆಯ ಅದೃಶ್ಯ ಬೇಲಿಯನ್ನು ಕಟ್ಟುತ್ತಾ ಹೋಗುತ್ತದೆ. ಅಮೂರ್ತವಾಗಿದ್ದ ಸಂಬಂಧಗಳಿಗೆ ಮೂರ್ತ ರೂಪ ಕೊಟ್ಟು ಅದು ಹಾಗೆಯೇ ಇರಬೇಕು ಎಂಬ ಒತ್ತಡವೂ ಇರುತ್ತದೆ. ಹೀಗೆ ತೋರುವಿಕೆ ಮತ್ತು ಇರುವಿಕೆಯ ನಡುವಿನ ಬಿರುಕು ಮತ್ತದರ ಪರಿಣಾಮವನ್ನು ತೋರಿಸುವ ಕಿರುಚಿತ್ರ 'ಸೇಪಿಯಾ'.

ಈ ಕಿರುಚಿತ್ರದ ಮೊದಲ ದೃಶ್ಯವೇ ಈ ಬಿರುಕನ್ನು ತುಂಬ ಸಮರ್ಥವಾಗಿ ಬಿಂಬಿಸುವಂತಿದೆ. ಉದಯೋನ್ಮುಖ ನಟ ರೂಹಾನ್, ತನ್ನ ಗೆಳತಿ ಕಾವ್ಯಾಳೊಟ್ಟಿಗೆ ಆನ್‌ಲೈನ್‌ನಲ್ಲಿ ಲೈವ್ ಬರುತ್ತಾನೆ. ಸೂಟು, ಟೈ ತೊಟ್ಟು, ಹೇರ್‌ಸ್ಟೈಲ್ ಮಾಡಿಕೊಂಡಿರುವ ಅವನು ಪ್ಯಾಂಟ್ ತೊಟ್ಟುಕೊಂಡಿಲ್ಲ. ಬರೀ ಒಳ ಉಡುಪಿನಲ್ಲಿದ್ದಾನೆ. ಆದರೆ ಮೊಬೈಲ್ ಕ್ಯಾಮೆರಾದಲ್ಲಿ ಅವನ ಎದೆಮಟ್ಟದ ಚಿತ್ರ ಮಾತ್ರ ಕಾಣಿಸುತ್ತಿರುವುದರಿಂದ ಹೊರಜಗತ್ತಿಗೆ ಅದು ತಿಳಿಯುವುದಿಲ್ಲ. ತಾವು 'ರೆಡಿ'ಯಾದದ್ದಷ್ಟನ್ನೇ ಹೊರಜಗತ್ತಿಗೆ ತೋರಿಸುತ್ತ ತಾವು ಹಾಗೆಯೇ ಇದ್ದೇವೆ ಎಂದು ತೋರಿಸಿಕೊಳ್ಳುವ ಅವರ ಮನಸ್ಥಿತಿಯೇ ಕೊನೆಗೆ ಸಂಬಂಧದಲ್ಲಿಯೂ ತೋರುತ್ತದೆ.

ರೋಹಾನ್ ತನಗೆ ಅತ್ಯುತ್ತಮ ಪ್ರಶಸ್ತಿ ಬಂದಿಲ್ಲ ಎಂಬ ನಿರಾಸೆಯಲ್ಲಿದ್ದಾನೆ. ಆದರೂ ತನ್ನ ಗೆಳತಿ ಕಾವ್ಯಾ ಮನೆಗೆ ಸ್ನೇಹಿತರನ್ನೆಲ್ಲ ಕರೆದು ಪಾರ್ಟಿ ಆಯೋಜನೆ ಮಾಡಿದ್ದಾನೆ. ಕಾವ್ಯಾಗೆ ಇಂಥ ಗದ್ದಿ ಪಾರ್ಟಿ ಇಷ್ಟವಿಲ್ಲ. ಸ್ನೇಹಿತರೆಲ್ಲ ಪಾರ್ಟಿಯನ್ನು ಎಂಜಾಯ್ ಮಾಡುತ್ತಿದ್ದರೆ ಇವರು ತಮ್ಮ ಸಂಬಂಧದ ಪೋಸ್ಟ್ ಮಾರ್ಟಂಗೆ ಇಳಿಯುತ್ತಾರೆ. ಪಾರ್ಟಿ ಮುಗಿಯುವಷ್ಟರಲ್ಲಿ ಸಂಬಂಧವನ್ನೂ ಕೊನೆಗೊಳಿಸಿಕೊಳ್ಳುವ ನಿರ್ಧಾರಕ್ಕೆ ಬಂದಿರುತ್ತಾರೆ.

ಪ್ರೀತಿ ಮತ್ತು ಹೊಂದಾಣಿಕೆ ಎನ್ನುವುದು ಸಹಜೀವನದ ಬಹುಮುಖ್ಯ ಅಂಶಗಳು ಎಂಬುದೇನೋ ನಿಜ. ಆದರೆ ಪರಸ್ಪರ ಹೊಂದಿಕೊಳ್ಳಲಾಗದಷ್ಟು ಕಂದರವನ್ನಿಟ್ಟುಕೊಂಡೂ ನಗು ನಟಿಸುವುದು ತರವೇ? ಕುಟುಂಬ ಎನ್ನುವುದು ಹೇಗಾದರೂ ಜೊತೆಗಿರುವ ಆಜೀವ ಸಜೆಯಾಗಬೇಕೇ? ಈ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ. ಈ ಪ್ರಶ್ನೆಯನ್ನು ಎತ್ತಿಕೊಂಡು ಬಹುತೇಕ ಸಿನಿಮಾಗಳು ಸುಖಾಂತ್ಯದ ದಡ ತಲುಪಿಸಿ ಕೈತೊಳೆದುಕೊಂಡಿವೆ. ಎಷ್ಟೆಲ್ಲ ಜಗಳವಾಡಿದರೂ, ಪರಸ್ಪರ ಹೊಂದಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಅನಿಸುತ್ತಿದ್ದರೂ ಬೇರಾಗುವುದಕ್ಕಿಂತ ಜೊತೆಗಿರುವುದೇ ಸರಿ ಎನ್ನುವುದನ್ನು ಪರೋಕ್ಷವಾಗಿ ಧ್ವನಿಸಲು ಹೊರಟಿದ್ದಾರೆ. ಈ ಕಿರುಚಿತ್ರವೂ ಅದೇ ಜಾಡು ಹಿಡಿಯುತ್ತದೆ. ಈ ತಂತ್ರ ನೋಡುಗನ ಮನಸ್ಸನ್ನು ಭಾವುಕಗೊಳಿಸಿ ಆ ಕ್ಷಣ ಹಗುರಾಗಿಸುತ್ತದೆ ಎಂಬುದೇನೋ ನಿಜ. ಆದರೆ ಈ ಹೊಂದಾಣಿಕೆಯಲ್ಲಿ ಒಂದುಗೂಡಿದವರ ನಾಳೆಗಳೂ ಅಷ್ಟೇ ರಮ್ಯವಾಗಿರುತ್ತವೆಯೇ ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಲಿಕ್ಕೇ ಹೋಗುವುದಿಲ್ಲ.

ಎಂದೆಂದಿಗೂ ಮುಚ್ಚಲಾರದ ಕಂದರಕ್ಕೆ ಕಟ್ಟಿದ ಭಾವುಕ ಸೇತುವೆ ನೋಡಲು ಚಂದ. ಆದರೆ ಅದನ್ನಿಟ್ಟುಕೊಂಡು ಬದುಕುವ ವಾಸ್ತವ 'ಸೇಪಿಯಾ' ಕಿರುಚಿತ್ರದ ಅಂತ್ಯದಷ್ಟು ಸರಳವಲ್ಲ; ಸಾಧುವೂ ಅಲ್ಲ.

ಈ ಕಿರುಚಿತ್ರ ವೀಕ್ಷಣೆಗೆ https://bit.ly/2QtInJa ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.